# ಉಪತಹಶೀಲ್ದಾರರು, ನಾಡ ಕಾರ್ಯಾಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1.ಎಸ್.ಲಿಂಗನಗೌಡ ತಂದೆ ದಿ//ಎಸ್.ಚನ್ನನಗೌಡ,<br>2.ಎಸ್.ಕರಿಯಮ್ಮ ತಂದೆ ದಿ//ಎಸ್.ಚನ್ನನಗೌಡ,<br>3.ಎಸ್.ಪ್ರಕಾಶ ತಂದೆ ದಿ//ಎಸ್.ಚನ್ನನಗೌಡ,<br>4.ಎಸ್.ಕೊಟ್ರಗೌಡ ತಂದೆ ದಿ//ಎಸ್.ಚನ್ನನಗೌಡ,<br>ತಳಕಲ್ಲು ಗ್ರಾಮ, ಹಡಗಲಿ ತಾ.<br>5.ಸಕ್ರಗೌಡ ಗಿರೀಶ ತಂದೆ ಶಾಂತಪ್ಪ,<br>ಮಹಜದಹಳ್ಳಿ ಗ್ರಾಮ, ಹಡಗಲಿ ತಾ | ಎಸ್.ಕೊಟ್ರಗೌಡ ತಂದೆ ಚನ್ನನಗೌಡ,<br>ತಳಕಲ್ಲು ಗ್ರಾಮ, ಹಡಗಲ ತಾ. |

ವಿವಾದಿತ ಜಮೀನಿನ ವಿವರ

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಮಹಜನದಹಳ್ಳಿ | 203/1 | 3-67 | ಖುಷ್ಕಿ |

ಪೀಠಿಕೆ :

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಮಹಜನದಹಳ್ಳಿ ಗ್ರಾಮದ ಸ.ನಂ.203/1 ವಿಸ್ತೀರ್ಣ 3-67 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ತಳಕಲ್ಲು ಗ್ರಾಮದ ನಿವಾಸಿಯಾದ ದಿ//ಎಸ್.ಚನ್ನನಗೌಡ ಇವರ ಮಕ್ಕಳಾದ ಎಸ್.ಲಿಂಗನಗೌಡ, ಎಸ್.ಕರಿಯಮ್ಮ, ಎಸ್.ಪ್ರಕಾಶ ಮತ್ತು ಎಸ್.ಕೊಟ್ರಗೌಡ ಇವರಿಂದ ತಳಕಲ್ಲು ಗ್ರಾಮದ ಸಕ್ರಗೌಡ ಗಿರೀಸ ತಂದೆ ಸಾಂತಪ್ಪ ಇವರು ನೋಂದಾಯಿತ ದಸ್ತಾವೇಜು ಸಂ.3696/15-16 ದಿನಾಂಕ 02-01-2016 ರಂದು ರೂ.2,79,000/- ಗಳಿಗೆ ಖರೀದಿ ಮಾಡಿರುತ್ತಾರೆ ಎಂದು ಉಪನೋಂದಣಾಧಿಕಾರಿಗಳು, ಹೂವಿನಹಡಗಲಿ ಇವರು ವರದಿಯನ್ನು ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟಿಸನ್ನು ದಿನಾಂಕ 07-01-2016 ರಂದು ಜಾರಿ ಮಾಡಲಾಗಿ, ನಿಗದಿತ ದಿನಾಂಕದೊಳಗೆ ಅಂದರೆ ದಿನಾಂಕ 29-01-2016 ರಂದು ತಳಕಲ್ಲು ಗ್ರಾಮದ ನಿವಾಸಿಯಾದ ಎಸ್.ಕೊಟ್ರಗೌಡ ತಂದೆ ಚನ್ನನಗೌಡ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ M.R.ಸಂಖ್ಯೆ 29/2015-16 ರ ಕಡತವು ವಿವಾದಿತ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ದಿನಾಂಕ 6-4--2016 ರಂದು ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಸದರಿ ಪ್ರಕರಣದ ವಿಚಾರಣೆಗೆ ಅರ್ಜಿದಾರರ-5 ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ತಾನು ಅರ್ಜಿದಾರರೊಂದಿಗೆ ರಾಜೀಯಾಗಿರುವುದಾಗಿ ಕ್ರಯಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ತನ್ನದು ಯಾವುದೇ ತಕರಾರು ಇರುವುದಿಲ್ಲ. ತಕರಾರನ್ನು ವಾಪಸ್ಸು ಪಡೆಯುತ್ತೇನೆ ಎಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಖರೀದಿದಾರರು ವ್ಯವಸಾಯಗಾರ ಕುಟುಂದಬ ಸದಸ್ಯ ದೃಢೀಕರಣ ಪತ್ರದ ಪ್ರತಿ ಸಲ್ಲಿಸಿದ್ದು, ಮಹಜನದಹಳ್ಳಿ ಗ್ರಾಮದ ಸ.ನಂ.21/ಸಿ ವಿ:4.02 ಎಕ್ರೆ ಜಮೀನನ್ನು ಹೊಂದಿದ್ದು, ಇದು ಅವರ ತಾಯಿಯ ಹೆಸರಿನಲ್ಲಿ ಇರುತ್ತದೆ. ಆದುದರಿಂದ ಈ ಕೆಳಕಂಡಂತೆ ಆದೇಶ

## ಆದೇಶ

ಸಂ/ಕಂ/ಪಹಣಿ/ವಿವಾದ/17/2015-16 ದಿನಾಂಕ 24-08-2016

**ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ಪ್ರಕಾರ M.R.ಸಂಖ್ಯೆ 29/2015-16 ರ ಪ್ರಕರಣದಲ್ಲಿ ನೋಂದಾಯಿತ ಕ್ರಯಪತ್ರದ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.**

(ಸತ್ಯಪ್ರಸಾದ ರಾವ್ ಎಂ.)
ಉಪತಹಶೀಲ್ದಾರರು,
ನಾಡ ಕಾರ್ಯಾಲಯ, ಇಟ್ಟಿಗಿ.
ಇಟ್ಟಿಗಿ

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.